**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ**

**ಸಿ.ಸಿ. 315/2014**

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | ಸರಸ್ವತಿ ಎಸ್ ಜಿ | **ಚಾಸಾಃ 11 ಪ್ರಾಸಾಃ 10** |
| **ಗಂಡನ ಹೆಸರು** | ರಾಜೇಶ್ | |
| **ವಯಸ್ಸು** | 48 ವರ್ಷ | |
| **ವೃತ್ತಿ** | ಉಪಪ್ರಾಶುಂಪಾಲರು | |
| **ವಾಸಸ್ಥಳ** | ಶಿವಮೊಗ್ಗ | |

ದಿನಾಂಕಃ **18.07.2022** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ಅಮಾನತ್ತು ಪಂಚನಾಮೆಯನ್ನು ಮತ್ತು ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-**11(ಸಿ)**ಎಂದು ಗುರುತಿಸಲಾಯಿತು. ದಿಃ 30-05-2013 ರಂದು ನಾನು ಆರೋಪಿಗೆ ಸಂಬಂಧಿಸಿದ ನಮ್ಮ ಶಾಲೆಯ ದಾಖಲಾತಿ ಪುಸ್ತಕವನ್ನು, ವರ್ಗಾವಣೆ ಪ್ರಮಾಣ ಪತ್ರ ಮತ್ತು ಪ್ರವೇಶ ಅರ್ಜಿಯನ್ನು ಪಿ ಎಸ್ ಐ ರವರ ಮುಂದೆ ಹಾಜರುಪಡಿಸಿದ್ದು, ಆಗ ಅವರು ಸದರಿ ದಾಖಲೆಗಳನ್ನು ನಿಪಿ-11 ದಾಖಲೆಯ ಮುಖೇನ ಸ್ವಾಧೀನಪಡಿಸಿಕೊಂಡಿದ್ದು, ಆ ಸಂದರ್ಭದಲ್ಲಿ ನಾನು ನಿಪಿ-11 ದಾಖಲೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದಾಖಲಾತಿ ಪುಸ್ತಕವನ್ನು, ವರ್ಗಾವಣೆ ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ. ಪ್ರವೇಶ ಅರ್ಜಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-**14** ಎಂದು ಗುರುತಿಸಲಾಯಿತು.

**ಪಾಟೀ ಸವಾಲು :- ಆರೋಪಿ ಪರ ವಕೀಲರರಿಂದ :-**

ನಾನು ದಾಖಲೆಗಳನ್ನು ಹಾಜರುಪಡಿಸಿದ ಸಂದರ್ಭದಲ್ಲಿ ಬಸವರಾಜಪ್ಪರವರು ಕಾಲೇಜಿನ ಪ್ರಾಶುಂಪಾಲರಾಗಿದ್ದರು. ಹೊನ್ನಾಳಿ ಠಾಣೆಯ ಪೊಲೀಸರು ಆರೋಪಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸುವಂತೆ ಶಾಲೆಯ ಮುಖ್ಯೋಪಾಧ್ಯಾಯರಿಗೆ ನೀಡಿದ್ದರು. ನಿಪಿ-12 ದಾಖಲೆ ಪ್ರಕಾರ ಆರೋಪಿಗೆ ಸೇರಿದ ಶಾಲಾ ದಾಖಲೆಗಳನ್ನು ನಾನು ದಿಃ 27-05-2013 ರಂದು ನೀಡಿರುತ್ತೇನೆ ಎಂದರೆ

ಸರಿ. ದಿಃ 30-05-2013 ರಂದು ನಾನು ಆರೋಪಿಗೆ ಸೇರಿದ ಶಾಲಾ ದಾಖಲಾತಿಗಳನ್ನು ಪೊಲೀಸರಿಗೆ ನೀಡಿರುವುದಿಲ್ಲ ಎಂದರೆ ಸರಿ. ನಾನು ದಾಖಲಾತಿಗಳನ್ನು ಪೊಲೀಸರಿಗೆ ನೀಡುವ ಮೊದಲು ಆರೋಪಿಯ ಹೆಸರು ಮತ್ತು ಜನ್ಮ ದಿನಾಂಕವನ್ನು ಪರಿಶೀಲಿಸಿರುತ್ತೇನೆ. ಆರೋಪಿಯು ಕುರುಬ ಜಾತಿಗೆ ಸೇರಿರುವುದಾಗಿ ಶಾಲಾ ದಾಖಲಾತಿಗಳಲ್ಲಿ ನಮೂದಿದೆ. ನಿಪಿ-4 ರಲ್ಲಿ ಆರೋಪಿಯು ಮುಸ್ಲಿಂ ಜನಾಂಗಕ್ಕೆ ಸೇರಿದವರು ಎಂದು ನಮೂದಾಗಿದೆ ಎಂದರೆ ಸರಿ. ಆರೋಪಿಯು ಮುಸ್ಲಿಂ ಜನಾಂಗದವರು ಅಲ್ಲದೇ ಇರುವುದರಿಂದ ನಾನು ಹಾಜರುಪಡಿಸಿರುವ ದಾಖಲೆಗಳು ಆತನಿಗೆ ಸಂಬಂಧಿಸಿದವುಗಳಲ್ಲ ಎಂದರೆ ಸರಿಯಲ್ಲ. ಆರೋಪಿಯ ತಂದೆ ಅನಕ್ಷರಸ್ಥರು ಎಂದರೆ ನನಗೆ ಗೊತ್ತಿಲ್ಲ. ಆರೋಪಿಯ ತಂದೆಯು ಹೆಬ್ಬೆಟ್ಟಿನ ರುಜು ಹಾಕುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪ್ರವೇಶ ಅರ್ಜಿಯಲ್ಲಿ ಇರುವ ಆರೋಪಿಯ ತಂದೆಯ ಸಹಿ ಅವರದಲ್ಲ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಶಾಲಾ ದಾಖಲೆಗಳನ್ನು ಅವರ ಪೋಷಕರಿಗೆ ಮಾತ್ರ ನೀಡುತ್ತೇವೆ ಎಂಬ ಪ್ರಶ್ನೆಗೆ ಸಾಕ್ಷಿಯು ಕೆಲವೊಂದು ಸಂದರ್ಭಗಳಲ್ಲಿ ಮಕ್ಕಳಿಗೆ ನೀಡುತ್ತೇವೆ ಎಂದು ಉತ್ತರಿಸಿರುತ್ತಾರೆ. ನಿಪಿ-2 ದಾಖಲೆಯನ್ನು ಯಾರು ಯಾರಿಗೆ ನೀಡಿರುತ್ತಾರೆ ಎಂಬ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ-2 ರಲ್ಲಿ ಆಗಿರುವ ತಿದ್ದುಪಡಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಮಹಜರ್ ನ್ನು ಪೊಲೀಸರು ಸಂಜೆ 5.00 ರಿಂದ 6.00 ಗಂಟೆಯವರೆಗೆ ಮಾಡಿರುತ್ತಾರೆ. ಪೊಲೀಸರು ಠಾಣೆಗೆ ಬರುವಂತೆ ನನಗೆ ಮೌಖಿಕವಾಗಿ ತಿಳಿಸಿದ್ದರು. ಮಹಜರ್ ಗೆ ನಮ್ಮ ಶಾಲೆಯ ಅಟೆಂಡರ್ ಮತ್ತು ಕ್ಲರ್ಕ್ ಸಹ ಸಹಿ ಮಾಡಿರುತ್ತಾರೆ . ನಿಪಿ-11 ದಾಖಲೆಯನ್ನು ಬರೆದ ಸಿಬ್ಬಂದಿಯ ಹೆಸರು ನನಗೆ ನೆನಪಿಲ್ಲ. ಪಿ ಎಸ್ ಐ ರವರು ನಿಪಿ-11 ದಾಖಲೆಯನ್ನು ಹೇಳಿ ಬರೆಸಿರುತ್ತಾರೆ .

ಪೊಲೀಸರು ನನ್ನ ಸಮಕ್ಷಮ ನಿಪಿ-11 ದಾಖಲೆಯನ್ನು ತಯಾರಿಸಿರುವುದಿಲ್ಲ ಹಾಗೂ ಸದರಿ ದಾಖಲೆಯಡಿ ಆರೋಪಿಗೆ ಸೇರಿದ ಶಾಲಾ ದಾಖಲೆಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಈ ಕೇಸಿಗೆ ಸಂಬಂಧಿಸಿದಂತೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ಪೊಲೀಸರ ಚಿತಾವಣೆ ಮೇರೆಗೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ .**

**ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**